ಕ್ರ ಸ	ಜಿಲ್ಲೆಯ ಹೆಸರು	ಕೈಮಗ್ಗಗಳ ಸಂಖ್ಯೆ	ವಿದ್ಯುತ್ ಮಗ್ಗಗಳ ಸಂಖ್ಯೆ
12	ಉತ್ತರ ಕನ್ನಡ	74	31
	ಒಟ್ಟು	47483	29253

ರಾಜ್ಯದಲ್ಲಿರುವ ಕೈಮಗ್ಗ ಹಾಗೂ ವಿದ್ಯುತ್ ಚಾಲಿತ ಮಗ್ಗಗಳು

234 (562) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ-ಗ್ರಾಮೀಣ) ಮಾನ್ಯ ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಜಿಲ್ಲಾವಾರು ಕೈಮಗ್ಗ ಹಾಗೂ ವಿದ್ಯುಚ್ಚಾಲಿತ ಮಗ್ಗಗಳ ಸಂಖ್ಯೆ ಎಷ್ಟು

ಆ) ಈ ಮಗ್ಗಗಳನ್ನು ಅವಲಂಬಿಸಿಕೊಂಡಿರುವ ನೇಕಾರರ ಸಂಖ್ಯೆ ಎಷ್ಟು

ಇ) ನೇಕಾರರಿಗೆ ಮಾಲು ಸರಬರಾಜು ಮಾಡುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು

ಈ) ರಾಜ್ಯದಲ್ಲಿರುವ ಎಲ್ಲಾ ರೀತಿಯ ಕೈಮಗ್ಗಗಳು ಉತ್ಪಾದಿಸುತ್ತಿರುವ ಬಟ್ಟೆಯ ಪ್ರಮಾಣ ಹಾಗೂ ಇದರ ಒಟ್ಟು ಮೌಲ್ಯ ಎಷ್ಟು

ಉ) ಕೈಮಗ್ಗಗಳ ಮಾಲೀಕರು ಆರ್ಥಿಕವಾಗಿ ದುಸ್ತಿತಿಯಲ್ಲಿದ್ದು ಅನೇಕ ಕೈಮಗ್ಗಗಳು ಮುಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಊ) ಕೈಮಗ್ಗಗಳ ಪುನಶ್ಚೇತನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್ ಎಂ ರೇವಣ್ಣ (ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು)

ಅ) ವಿವರಗಳನ್ನು ಇದಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ

ಆ) ಕೈಮಗ್ಗ ನೇಕಾರರು – 1,89,934

ವಿದ್ಯುತ್ ಮಗ್ಗ ನೇಕಾರರು – 1,27,535

ಇ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ಕಾವೇರಿ ಹ್ಯಾಂಡಲೂಮ್ಸ್, ಕರ್ನಾಟಕ ರಾಜ್ಯ ಉಣ್ಣೆ ನೇಕಾರರ ಸೇವಾ ಸಹಕಾರ ಸಂಘಗಳಿಗೆ ಕಚ್ಚಾಮಾಲನ್ನು ಸರಬರಾಜು ಮಾಡಲಾಗುತ್ತಿದೆ

ಈ) ಉತ್ಪಾದಿಸುತ್ತಿರುವ ಬಟ್ಟೆಯ ಪ್ರಮಾಣ ಸುಮಾರು 63 90 ಮಿಲಿಯನ್ ಮೀಟರ್ ಆಗಿದ್ದು ಅದರ ಅಂದಾಜು ಮೌಲ್ಯ ರೂ 319 50 ಕೋಟಿ ಆಗಿರುತ್ತದೆ

ಉ) ಬಂದಿದೆ

ಊ) ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಅವುಗಳಲ್ಲಿ ಈ ಕೆಳಗಿನವುಗಳು ಮುಖ್ಯವಾದವುಗಳಾಗಿರುತ್ತದೆ –

1 ದೀನದಯಾಳ್ ಹತ್‌ಕರ್ಗಾ ಪ್ರೋತ್ಸಾಹನ ಯೋಜನೆ

2 ಸಮಗ್ರ ಕೈಮಗ್ಗ ತರಬೇತಿ ಯೋಜನೆ

ಅನುಬಂಧ

ಕ್ರ ಸಂ	ಜಿಲ್ಲೆಯ ಹೆಸರು	ಕೈಮಗ್ಗಗಳ ಸಂಖ್ಯೆ	ವಿದ್ಯುತ್ ಮಗ್ಗಗಳ ಸಂಖ್ಯೆ
1	2	3	4
1	ಬೆಂಗಳೂರು (ನ)	8352	25321

1	2	3	4
2	ಬೆಂಗಳೂರು (ಗ್ರಾ)	288	32975
3	ಬೆಳಗಾಂ	5099	14650
4	ಬಳ್ಳಾರಿ	2402	28
5	ಬೀದರ್	1336	0
6	ಬಿಜಾಪುರ	3756	1750
7	ಬಾಗಲಕೋಟೆ	20599	9918
8	ಚಿಕ್ಕಮಗಳೂರು	218	0
9	ಚಿತ್ರದುರ್ಗ	3425	14
10	ದಾವಣಗೆರೆ	3426	30
11	ದಕ್ಷಿಣಕನ್ನಡ	721	4
12	ಉಡುಪಿ	721	6
13	ಧಾರವಾಡ	891	230
14	ಗದಗ್	4012	1081
15	ಹಾವೇರಿ	4016	1086
16	ಗುಲ್ಬರ್ಗ	3525	34
17	ಹಾಸನ	962	0
18	ಕೊಡಗು	28	0
19	ಕೋಲಾರ	1827	256
20	ಮಂಡ್ಯ	238	30
21	ಮೈಸೂರು	680	101
22	ಚಾಮರಾಜನಗರ	684	104
23	ರಾಯಚೂರು	274	89
24	ಕೊಪ್ಪಳ	1499	356
25	ಶಿವಮೊಗ್ಗ	1026	0
26	ತುಮಕೂರು	6426	472
27	ಉತ್ತರ ಕನ್ನಡ	74	31
	ಒಟ್ಟು	76605	88566

ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳು

235 (563) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?